ದಿನಾಂಕಃ 02.02.2026 ರಂದು ಸಾಕ್ಷಿಗೆ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಆರೋಪಿ ಪರವಾಗಿ ಎಲ್.ಎ.ಡಿ.ಸಿ. ವಕೀಲರಿಂದ

29. ನಾನು ಚಾಸಾ.1 ರವರಿಗೆ ಠಾಣೆಗೆ ಹೋಗಿ ದೂರು ನೀಡುವಂತೆ ಸೂಚನೆ ನೀಡುವ ಪೂರ್ವದಲ್ಲಿ ರೂಬಿನ್ ಮೊಸಸ್ ಎನ್ನುವವರನ್ನು ಸ್ಥಳದಲ್ಲಿ ವಿಚಾರಣೆ ಮಾಡಿದ್ದೇನೆ. ನಾನು ಸ್ಥಳಕ್ಕೆ ಭೇಟಿ ನೀಡುವ ಸಂದರ್ಭದಲ್ಲಿ ಸಮಯ ಸುಮಾರು ಸಂಜೆ 6.00 ಗಂಟೆಯಾಗಿತ್ತು. ಆ ಸಮಯದಲ್ಲಿ ರೂಬಿನ್ ಮೊಸಸ್ ಎನ್ನುವವರು ಸ್ಥಳದಲಿದ್ದರು. ಆರೋಪಿಯನ್ನು ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗುವ ಪೂರ್ವದಲ್ಲಿ ಆತನಿಗೆ ಯಾವುದೇ ನೋಟೀಸನ್ನು ಕೊಟ್ಟಿಲ್ಲ. ಆರೋಪಿಯನ್ನು ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗುವ ಪೂರ್ವದಲ್ಲಿ ಆತನ ಮೇಲೆ ದಸ್ತಗಿರಿ ಕ್ರಮ ವಹಿಸಿಲ್ಲ, ವಶಕ್ಕೆ ಮಾತ್ರ ಪಡೆದುಕೊಂಡಿದ್ದೇನೆ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ.

30. ನಾನು ಆರೋಪಿಯನ್ನು ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗುವ ಸಂದರ್ಭದಲ್ಲಿ ಠಾಣೆಯಲ್ಲಿ ಎ.ಎಸ್.ಐ. ಒಬ್ಬರು ಠಾಣಾಧಿಕಾರಿಯಾಗಿ ಕರ್ತವ್ಯದಲ್ಲಿದ್ದರು. ಅವರ ಹೆಸರು ನನಗೀಗ ನೆನಪಿಲ್ಲ. ಸದರಿ ದಿನ ಎ.ಎಸ್.ಐ. ರವರು ಠಾಣಾಧಿಕಾರಿಯಾಗಿ ಯಾವ ಸಮಯದಲ್ಲಿ ಕೆಲಸ ಮಾಡಿದ್ದರು ಎಂದು ಈಗ ಹೇಳಲು ಆಗುವುದಿಲ್ಲ. ಮು.ಮಾ.2 ಮತ್ತು 3 ನ್ನು ಆರೋಪಿಯು ನನ್ನ ಮುಂದೆ ಹಾಜರುಪಡಿಸಿದ್ದಾನೆ.

31. ಗೌರಿ ಕಾಲುವೆಯಲ್ಲಿರುವ ನೀರಿನ ಟ್ಯಾಂಕಿನ ಅಕ್ಕಪಕ್ಕದಲ್ಲಿ ಅನೇಕ ವಾಸದ ಮನೆಗಳಿವೆ ಎಂದರೆ ಸರಿ. ಗೌರಿ ಕಾಲುವೆಯಲ್ಲಿರುವ ಮನೆ ಮತ್ತು ಅಂಗಡಿಗಳಲ್ಲಿ ಸಿಸಿ ಟಿವಿ ಅಳವಡಿಸಿದ್ದಾರೆ ಎಂದರೆ ಇರಬಹುದು. ನಾನು ಪ್ರಥಮ ಬಾರಿಗೆ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡುವಾಗ ನನ್ನ ಜೊತೆ

ನನ್ನ ಠಾಣೆಯ ಸಿಬ್ಬಂದಿಗಳನ್ನು ಕರೆದುಕೊಂಡು ಹೋಗಿರುತ್ತೇನೆ. ನನ್ನ ಜೊತೆ ಬಂದ ಸಿಬ್ಬಂದಿಗಳ ಹೆಸರನ್ನು ಈಗ ಹೇಳಲು ಆಗುವುದಿಲ್ಲ. ಏಕೆಂದರೆ ನೆನಪಿಲ್ಲ. ದೂರು ನೀಡಲು ಚಾಸಾ.1 ರವರು ಮಾತ್ರ ಠಾಣೆಗೆ ಬಂದಿದ್ದರು.

32. ಸ್ಥಳದಲ್ಲಿ ಪೋಟೋ ತೆಗೆಯಲು ಉಪಯೋಗಿಸಿದ ಕ್ಯಾಮೆರಾದ ಕಂಪೆನಿ ಹೆಸರು ಮತ್ತು ಮಾಡೆಲ್ ನಂಬರು ನನಗೆ ನೆನಪಿಲ್ಲ. ಡಿಜಿಟಲ್ ಕ್ಯಾಮೆರಾದಲ್ಲಿ ಪೋಟೋ ತೆಗೆದಾಗ ಪೋಟೋದ ಮೇಲೆ ಪೋಟೊ ತೆಗೆದ ದಿನ, ತಿಂಗಳು ಮತ್ತು ಇಸವಿ ನಮೂದಾಗುತ್ತದೆ ಎಂದರೆ ಸಾಕ್ಷಿಯು ಕ್ಯಾಮೆರಾದಲ್ಲಿ ಸೆಟ್ಟಿಂಗ್ ಮಾಡಿಕೊಂಡರೆ ಮಾತ್ರ ಬರುತ್ತದೆ ಎಂದು ನುಡಿಯುತ್ತಾರೆ. ಪಿರ್ಯಾದುದಾರರ ಚಿತಾವಣೆ ಮೇರೆಗೆ ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

Sd/-

(ಪ್ರಕಾಶ್ ವಿ.)

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ